ಆ) ಅಫೆಡಾ ಸಂಸ್ಥೆಯು 3-5-90 ರಿಂದ 18-5-90ರವರೆಗೆ ಪಶ್ಚಿಮ ಯುರೋಪ್ ದೇಶದಲ್ಲಿ ಏರ್ಪಡಿಸಿದ್ದ ಮಾರುವವರ ಮತ್ತು ಕೊಳ್ಳುವವರ ಕೂಟಕ್ಕೆ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು 4 ಜಾತಿಯ 850 ಕೆ.ಜಿ. ಮಾವಿನ ಹಣ್ಣುಗಳನ್ನು ಕಳುಹಿಸಿತ್ತು.

ರಫ್ತು ಪರವಾನಗಿಯ ಆಧಾರದ ಮೇಲೆ ಹೊರ ದೇಶಗಳಿಗೆ ಹಣ್ಣು ಮತ್ತು ತರಕಾರಿ ರಫ್ತು ಮಾಡುವ ಬಗ್ಗೆ ವ್ಯವಹರಿಸಲಾಗುತ್ತಿದ್ದು ಈ ದಿಸೆಯಲ್ಲಿ ಖಟಾರ್ ರಾಷ್ಟ್ರದಿಂದ ಹಣ್ಣು ಮತ್ತು ತರಕಾರಿಗಳಿಗೆ ಬೇಡಿಕೆ ಬಂದಿದ್ದು, ಸಂಘದ ವತಿಯಿಂದ ದರಪಟ್ಟಿಯನ್ನು ಕಳುಹಿಸಲಾಗಿದೆ. ಮತ್ತು ಸರಬರಾಜು ಬೇಡಿಕೆಯನ್ನು ನಿರೀಕ್ಷಿಸಲಾಗುತ್ತಿದೆ.

ತೆಂಗುಬೆಳೆಗೆ ಬಂದಿರುವ ರೋಗದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮ.

1313 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಂಗು ಬೆಳೆಗೆ ಕಾಯಿಲೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು)

ಅ) ಇಲ್ಲ. ಆದರೆ ತೆಂಗು ಬೆಳೆಗೆ ಕಪ್ಪು ತಲೆ ಕಂಬಳಿ ಹುಳುವಿನ ಬಾಧೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ತೋಟಗಾರಿಕೆ ಇಲಾಖಾ ವತಿಯಿಂದ ತೆಂಗು ಬೆಳೆಗೆ ಬೀಳುವ ಕಪ್ಪು ತಲೆ ಕಂಬಳಿ ಹುಳುವಿನ ನಿಯಂತ್ರಣದ ಬಗ್ಗೆ ರೈತರಿಗೆ ಸೂಕ್ತ ಮಾರ್ಗ ದರ್ಶನ ನೀಡಲಾಗುತ್ತಿದ್ದು, ಪರಿಣಾಮಕಾರಿಯಾಗಿ ತಡೆಗಟ್ಟುವುದಕ್ಕಾಗಿ ಇಲಾಖೆಯಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ಕೀಟ ಪೀಡಿತ ಪ್ರದೇಶಗಳಿಗೆ ಉಚಿತವಾಗಿ ಹಂಚಲಾಗುತ್ತದೆ. ಕೀಟಬಾದೆ ತೀವ್ರವಾಗಿರುವ ಪ್ರದೇಶದಲ್ಲಿ ಕೀಟನಾಶಕಗಳನ್ನು ಸಹ ರಿಯಾಯತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ.

ಅತಿವೃಷ್ಟಿಯಿಂದ ಮತ್ತು ಅನಾವೃಷ್ಟಿಯಿಂದ ನಾಶವಾದ ಬೆಳೆಗೆ, ಬೆಳೆ ಸಮೀಕ್ಷಾಪದ್ಧತಿಯನ್ನು ಬದಲಾಯಿಸಲು ಒತ್ತಾಯ.

1289 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಬೆಳೆ ಅತಿವೃಷ್ಟಿಯಿಂದಲೂ, ಅನಾವೃಷ್ಟಿಯಿಂದಲೂ ನಷ್ಟವಾದರೆ ಬೆಳೆ ಸಮೀಕ್ಷಿಸುವ ಪದ್ಧತಿ ಸುಮಾರು 20 ವರ್ಷಗಳ ಮೊದಲು ಬೆಳೆಯುವ ಸರಾಸರಿ ಬೆಳೆಯನ್ನು ತೆಗೆದುಕೊಂಡು ಬೆಳೆ ಸಮೀಕ್ಷಿಸುವುದರಿಂದ ಆಣೆವಾರಿ ಸರಿಯಾಗಿ ಬರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಸರ್ಕಾರ ಕೈಕೊಂಡಿರುವ ಕ್ರಮವೇನು?

ಇ) ಕ್ರಮ ಕೈಗೊಳ್ಳದ ಪಕ್ಷದಲ್ಲಿ ಈ ವರ್ಷ ಅನಾವೃಷ್ಟಿಯಿಂದಲೂ, ಅತೀವೃಷ್ಟಿಯಿಂದಲೂ ಬರಕ್ಕೆ ತುತ್ತಾಗಿರುವ ರೈತರಿಗೆ ಆಣ್ಣೆವಾಗಿ ತೆಗೆಯಲು ಈಗಿನ ಸರಾಸರಿ ಬೆಳೆಯನ್ನು ಗಮನಿಸಿ ಬೆಳೆ ಸಮೀಕ್ಷಿಸುವ ವ್ಯವಸ್ಥೆಯನ್ನು ಮಾಡಬಹುದೇ?

ಈ) ಗುಲ್ಬರ್ಗಾ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿ ಅತೀವೃಷ್ಟಿಯಿಂದ ಮುಂಗಾರು ಹಿಂಗಾರು ಬೆಳೆಗಳು ನಾಶವಾದ ಕಾರಣ ಇದರ ಆಣೆವಾರಿ ಈಗಿನ ಸರಾಸರಿ ಬೆಳೆಯನ್ನು ಅನುಸರಿಸಿ ಸಮೀಕ್ಷಿಸುವ ವ್ಯವಸ್ಥೆ ಮಾಡಬಹುದೇ?